# ಹೊಸ ಅನುಭವದ ಪ್ರಭೆಯಲ್ಲಿ ಅದಿತಿ



ಚಂದನವನಕ್ಕೆ ಕಾಲಿಟ್ಟ ಅತಿ ಕಡಿಮೆ ಅವಧಿಯಲ್ಲೇ ಭರವಸೆಯ ನಾಯಕಿ ಎನಿಸಿಕೊಂಡ ನಟಿ ಅದಿತಿ ಪ್ರಭುದೇವ, ಮತ್ತೊಂದು ಹೊಸ ಹೆಜ್ಜೆ ಇಟ್ಟಿದ್ದಾರೆ.

ಮೊಟ್ಟ ಮೊದಲ ಬಾರಿಗೆ, ನಟ ವಿಕ್ರಮ್ ರವಿಚಂದ್ರನ್ ಅವರೊಂದಿಗೆ, 'ಲವ್ ಯು ಅಭಿ' ವೆಬ್ ಸರಣಿಯಲ್ಲಿ ನಟಿಸಿದ್ದು, ಕಿರುತೆರೆ, ಬೆಳ್ಳಿತೆರೆಯಾಚೆಗಿನ ಹೊಸ ಅನುಭವಗಳಿಗೆ ತೆರೆದುಕೊಂಡಿದ್ದಾರೆ. ವೆಬ್ ಸರಣಿ ಕುರಿತು, ಇದರಲ್ಲಿನ 'ಅಭಿರಾಮಿ' ಪಾತ್ರವಾಗಿ ತಾವು ಕಂಡ ಅನುಭವಗಳ ಕುರಿತು ಮಾತು ಹಂಚಿಕೊಂಡಿದ್ದಾರೆ.

◆ **ವೆಬ್ ಸರಣಿ ಲೋಕಕ್ಕೆ ಕಾಲಿಟ್ಟಿದ್ದೀರಿ. ಇಲ್ಲಿ ನೀವು ಕಂಡ ಅನುಭವಗಳು?**

ನನ್ನ ಸಿನಿಮಾ ಜರ್ನಿಯ ಐದು ವರ್ಷಗಳಲ್ಲಿ ನನಗೆ ಇದುವರೆಗೂ ಆಗದಂಥ ಅನುಭವ ಈ ವೆಬ್ ಸರಣಿ ಶೂಟ್ ಮಾಡಬೇಕಾದರೆ ಆಯಿತು. ನನ್ನ ಅಮ್ಮನ ಪಾತ್ರದಲ್ಲಿನ ವಿನಯಾ ಪ್ರಸಾದ್ ಅವರಾಗಲೀ, ವಿಕ್ರಮ್ ರವಿಚಂದ್ರನ್ ಅವರಾಗಲಿ, ನಾನಾಗಲೀ, ನಮಗೇ ಗೊತ್ತಿಲ್ಲದೇ ಆನ್ ಕ್ಯಾಮೆರಾದಲ್ಲಿ, ಎಷ್ಟೋ ಸೀನ್‌ಗಳಲ್ಲಿ ಸ್ಕ್ರಿಪ್ಟ್‌ನಲ್ಲಿಲ್ಲದ ನಮ್ಮದೇ ಡೈಲಾಗ್‌ಗಳನ್ನು ಹೇಳಿದ್ದೇವೆ. ಅದು ನಮಗೇ ಗೊತ್ತಿಲ್ಲದೆ ಆಗುತ್ತಿತ್ತು. ಸ್ವಲ್ಪ ಹೊತ್ತಾದ ಮೇಲೆ ಇಷ್ಟೆಲ್ಲಾ ಮಾತಾಡಿದೆವಾ ಎಂದು ಆಶ್ಚರ್ಯವಾಗುತ್ತಿತ್ತು. ಆ ಮಟ್ಟಿಗೆ ಪಾತ್ರದಲ್ಲಿ ನಾವು ಬೆರೆತುಹೋಗಿದ್ದೆವು. ಪಾತ್ರಗಳೇ ನಾವಾಗಿಬಿಟ್ಟಿದ್ದೆವು. ಈ ವೆಬ್ ಸರಣಿಗೆ ಜನರು ಹೇಗೆ ಸ್ಪಂದಿಸಬಹುದು ಎನ್ನುವ ಬಗ್ಗೆ ನಾನು ಕೂಡ ತುಂಬಾ ಉತ್ಸುಕಳಾಗಿದ್ದೇನೆ.

◆ **ಕನ್ನಡದಲ್ಲಿ ದೊಡ್ಡ ಮಟ್ಟದಲ್ಲಿ ರೂಪುಗೊಂಡ ಈ ವೆಬ್ ಸೀರೀಸ್ ಬಗೆಗೆ ನಿಮ್ಮ ಮಾತು...**

ಇದೊಂದು ಅದ್ಭುತ, ಅದ್ದೂರಿಯಾದ ಕನ್ನಡದ ವೆಬ್ ಸರಣಿ ಎಂದು ಆತ್ಮವಿಶ್ವಾಸದಿಂದ ಹೇಳಬಹುದು. ತನು–ಮನ–ಧನ ಹಾಕಿ ಪ್ರೀತಿಯಿಂದ ಮಾಡಿದ ಸೀರೀಸ್. ಕರ್ನಾಟಕದಲ್ಲಿ ಈ ಥರದ ವೆಬ್ ಸೀರೀಸ್ ಒಂದು ದೊಡ್ಡ ಬೆಳವಣಿಗೆ ಎಂದು ಹೇಳಬಹುದು. ನಾನು ಕೆಲವು ಹಿಂದಿ ಸೀರೀಸ್ ನೋಡುತ್ತಾ, ಎಷ್ಟು ಚೆನ್ನಾಗಿದೆ ಅಂದುಕೊಳ್ಳುತ್ತಿದ್ದೆ. ಕನ್ನಡದಲ್ಲೂ ಇಂಥ ಪ್ರಯೋಗಗಳು ನಡೆಯಬೇಕು ಎಂದುಕೊಳ್ಳುತ್ತಿದ್ದೆ.

**ಏಳು ಕಂತುಗಳ ಸರಣಿ**

ಕಾಳಿ ವೇಲಾಯುಧಂ ನಿರ್ಮಾಣ ಮಾಡಿ ನಿರ್ದೇಶಿಸಿರುವ 'ಲವ್ ಯು ಅಭಿ' ವೆಬ್ ಸರಣಿ ಜಿಯೋ ಸಿನಿಮಾದಲ್ಲಿ ಬಿಡುಗಡೆ ಆಗಿದೆ. ವಿಕ್ರಮ್ ರವಿಚಂದ್ರನ್, ಅದಿತಿ ಪ್ರಭುದೇವ ಹಾಗೂ ರವಿಶಂಕರ್ ಈ ಸರಣಿಯಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಮೇ 19ರಂದು ಈ ಸರಣಿ ಬಿಡುಗಡೆಯಾಗಿದ್ದು, 30 ನಿಮಿಷಗಳ ಏಳು ಕಂತುಗಳಲ್ಲಿ ಅಭಿ ಬದುಕಿನ ಕಥೆ ಹೇಳಲಾಗಿದೆ. ಈ ಸಸ್ಪೆನ್ಸ್ ಥ್ರಿಲ್ಲರ್ ಕಥೆಯಲ್ಲಿ ವಿನಯಾ ಪ್ರಸಾದ್, ರಚಿತಾ ಮಹಾಲಕ್ಷ್ಮಿ, ಅಶೋಕ್ ಶರ್ಮ, ಶ್ರೀನಾಥ್, ಅಂಬಿಕಾ, ಶ್ರೀನಿವಾಸ ಮೂರ್ತಿ, ಸುಂದರ್‌ರಾಜ್ ಮುಂತಾದ ಕಲಾವಿದರು ನಟಿಸಿದ್ದಾರೆ.